ದಿನಾಂಕಃ 27.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : 3 ಮತ್ತು 4ನೇ ಎದುರುದಾರರ ಪರ ವಕೀಲರಿಂದ :</u>**

ನಾವು ಆ ದಿನ ಬೋಗಾದಿಯಿಂದ ಅಗ್ರಹಾರದಲ್ಲಿರುವ ನಮ್ಮ ಮನೆಗೆ ಹೋಗುತ್ತಿದ್ದೆವು. ಅಪಘಾತವಾದ ವೃತ್ತದಲ್ಲಿ ಒಟ್ಟು 3 ರಸ್ತೆಗಳು ಕೂಡುತ್ತವೆ. ನಾವು ಹೋಗುತ್ತಿದ್ದ ರಸ್ತೆಯಲ್ಲಿ ನಾವು ಎಡಭಾಗಕ್ಕೆ ತಿರುವು ತೆಗೆದುಕೊಳ್ಳಬೇಕಿತ್ತು. ಆ ದಿನ ನಾವು ಒಟ್ಟು 3 ಜನ ಸದರಿ KTM Bike ನಲ್ಲಿ ಪ್ರಯಾಣ ಮಾಡುತ್ತಿದ್ದೆವು ಎಂದರೆ ಸರಿ. ನನಗೂ ಸಹ ದ್ವಿಚಕ್ರ ವಾಹನ ಚಾಲನೆ ಮಾಡಲು ಬರುತ್ತದೆ. ರಕ್ಷಿತ್ ಮತ್ತು ನಾನು ಹೆಲ್ಮೆಟ್ ಧರಿಸಿದ್ದೆವು, ಅಭಿಷೇಕ್ ಹೆಲ್ಮೆಟ್ ಹಾಕಿರಲಿಲ್ಲ. ಅಪಘಾತದ ನಂತರ ನನಗೆ ಪ್ರಜ್ಞೆ ಇರಲಿಲ್ಲ. ಪೊಲೀಸರು ಹೆಲ್ಮೆಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೋ, ಇಲ್ಲವೋ ಗೊತ್ತಿಲ್ಲ. ಸದರಿ ವೃತ್ತದಲ್ಲಿ ಹೆಚ್ಚು ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಪೊಲೀಸರು ದಾಖಲಿಸಿದ ಕ್ರಿಮಿನಲ್ ಪ್ರಕರಣದ ಬಗ್ಗೆ ನನಗೆ ಗೊತ್ತು. KTM Bike ಗೆ ಏನು ಜಖಂ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ವೃತ್ತದಲ್ಲಿ ಕಾರು ಬಲಭಾಗಕ್ಕೆ ತಿರುವು ತೆಗೆದುಕೊಂಡು ಹೋಗಬೇಕಿತ್ತು ಎಂದರೆ ಸರಿ. ಕಾರಿನ ಎಡಭಾಗಕ್ಕೆ ನಮ್ಮ ವಾಹನ ಹೋಗಿ ಗುದ್ದಿರುತ್ತದೆ ಹಾಗೂ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸುಳ್ಳು, ಎರಡೂ ವಾಹನಗಳ ತಪ್ಪು ಇರುತ್ತದೆ ಎಂದು ಹೇಳುತ್ತಾರೆ.

**2.** ಅಪಘಾತವಾದಾಗ ನಾನು ಡಿಪ್ಲೋಮೋ ಓದುತ್ತಿದ್ದೆ ಹಾಗೂ ನಾನು Part time ಕೆಲಸಕ್ಕೆ ಹೋಗುತ್ತಿದ್ದೆ. ಅಪಘಾತದ ನಾನು ವಿದ್ಯಾಭ್ಯಾಸ ನಿಲ್ಲಿಸಿರುತ್ತೇನೆ. ನಾನು ಕಾಲೇಜಿನವರಿಗೆ ಅಪಘಾತದ ಬಗ್ಗೆ ಪತ್ರ ಬರೆದು ತಿಳಿಸಿಲ್ಲ. ನಾನು NIKE ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದೆ. ನಾನು ಚಿಕ್ಕದಾದ ಪ್ರಾವಿಜನ್ ಸ್ಟೋರ್ ಕೂಡ ನಡೆಸುತ್ತಿದ್ದೆ, ಆ ಬಗ್ಗೆ ದಾಖಲೆ ಇಲ್ಲ.

**3.** ರಕ್ಷಿತ್‌ರವರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಪೊಲೀಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಎರಡೂ ವಾಹನದ ಚಾಲಕರ ತಪ್ಪಿರುತ್ತದೆ ಎಂದು ಹೇಳುತ್ತಾರೆ.

**4.** ನಾನು ಮಾಸಿಕವಾಗಿ ರೂ.15,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನನಗೆ ನಾನು ಹೇಳಿದಷ್ಟು ಆದಾಯ ಇಲ್ಲ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ ಒಳರೋಗಿಯಾಗಿ 45 ದಿನ ಆಸ್ಪತ್ರೆಗೆ ದಾಖಲಾಗಿಲ್ಲ ಹಾಗೂ 5 ಲಕ್ಷ ರೂ.ಗಳನ್ನು ಚಿಕಿತ್ಸೆಗಾಗಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿದ್ದ ಸಮಯದಲ್ಲಿ ಪ್ರತಿದಿನ 350/- ರೂ.ಗಳನ್ನು ಸಹಾಯಕನಿಗೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಚಿಕಿತ್ಸೆ ಪಡೆಯುವಾಗ ವಾಹನ ಮತ್ತು ಇತರೇ ಖರ್ಚು ಪ್ರತಿಬಾರಿಗೆ ರೂ.3,000/- ಮಾಡಿಲ್ಲ ಎಂದರೆ ಸುಳ್ಳು. ಭವಿಷ್ಯದ ಚಿಕಿತ್ಸೆಗಾಗಿ 2 ಲಕ್ಷ ರೂ. ಅವಶ್ಯಕತೆ ಇಲ್ಲ ಎಂದರೆ ಸುಳ್ಳು. ಅಪಘಾತಕ್ಕೂ ಮುಂಚೆ ನಾನು ಚೆನ್ನಾಗಿದ್ದು, ಈಗಲೂ ಸಹ ಚೆನ್ನಾಗಿರುತ್ತೇನೆ ಎಂದರೆ ಸುಳ್ಳು. ಅಪಘಾತ ರಕ್ಷಿತ್ ರವರ ತಪ್ಪಿನಿಂದ ಆಗಿದ್ದು ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ಒಬ್ಬನೇ ಬಂದಿರುತ್ತೇನೆ ಎಂದರೆ ಸರಿ. ನಾನು ಈಗ ಯಾವುದೇ ಕೆಲಸ ಮಾಡಲು ಆಗುತ್ತಿಲ್ಲ. ಕೆಲಸ ಮಾಡಬಾರದು ಎಂದು ವೈದ್ಯರು ಸರ್ಟಿಫಿಕೇಟ್ ನೀಡಿಲ್ಲ ಎಂದರೆ ಸಾಕ್ಷಿ ನನಗೆ ಕೆಲಸ ಮಾಡು ಆಗುತ್ತಿಲ್ಲ ಎನ್ನುತ್ತಾರೆ. ಹೆಚ್ಚಿನ ಪರಿಹಾರ ಪಡೆಯಲು ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ

ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ಮತ್ತು 4ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**